

## 1

ಕಡ್ಡೆಗುಡ್ಡೆಯ ಒಂದು ಪಾರ್ಶ್ವದಿಂದ ಮೆಲ್ಲಗೆ ಜಾರುತ್ತ ತೆರೆಗಳಲ್ಲಿ ಕರಡಿಹೋಗುವ ಸೂರ್ಯನಿಗೂ ಗೊತ್ತಿರಲಿಲ್ಲ ಬುಗುರಿ ಮರದ ಮೂಕೆಯಲ್ಲಿ ಕುಳಿತ ಯುವಕ ಮಂಡಳಿ ಇವತ್ತು ಬರೀ ನಾಮ್ ಕೆ ವಾಸ್ತೆ ಇಸ್ಪೀಟೆಲೆಗಳನ್ನು ಹರಡಿಕೊಂಡು ಕುಳಿತಿದೆ ಅಂತ. ಯಾರಿಗೂ ಎಕ್ಕ, ಗುಲಾಮ, ರಾಜನಲ್ಲಾಗಲಿ, ಮುಂದೆ ಎಲೆ ಸುಗಿದಾಗ ಬರಬಹುದಾದ ಜೋಕರನ ಮೇಲಾಗಲಿ ಆಸಕ್ತಿಯಿರಲಿಲ್ಲ. ಇಸ್ಪೀಟೆಲೆಯ ರಾಜ ರಾಣಿಯರ ಮುಖದಲ್ಲಿ ಎಂದಿನ ಕಳೆಯೂ ಬಹುಶಃ ಇರಲಿಲ್ಲ ಎಂದೇ ಇಟ್ಟುಕೊಳ್ಳಿ. ಮಾತು ಹುಟ್ಟಲು, ಹುಟ್ಟಿದ ಮಾತಿಗೆ ರೆಕ್ಕೆ ಬಾಲ ಮೂಡಿ ಅದು ಬೆಳೆದು ಮುಂದುವರೆಸಿಕೊಂಡು ಹೋಗಲು ಒಂದೇನಾದರೂ ಕಂತ್ರಾಟಿಕೆಯ ದಾರಿ ಬೇಕಿತ್ತು ಅಷ್ಟೇ!

ಒಂದರ ಮೇಲೊಂದು ಕವುಚಿ ಸಾರಿಕೆಯಾಗಿ ಬಿದ್ದುಕೊಂಡ ಇಸ್ಪೀಟೆಲೆಯನ್ನೆಳೆದುಕೊಳ್ಳುತ್ತ, 'ಹಾ... ಹೂಂ... ಪ್ಚ್ ಚ್ಚ್' ಎಂದು ಬಾಯ್ತುದಿಯಲ್ಲಿ ನಾದಗೈದು ವಿಷಾದ ವ್ಯಕ್ತಪಡಿಸಿ ಮತ್ತೆ ಸುಮ್ಮನಾಗುತ್ತ, ಸಂಪುನ ಅಂಗಡಿಯ ಗುಟಕಾ ಜಗಿದು, ಎದ್ದರೆ ಕುಂಡೆ ಸವೆಯುತ್ತದೆಂಬ ಪರಿಯಲ್ಲಿ ಕುಳಿತಲ್ಲಿಯೇ ಬಗೇಲಿ ಮುಖ ವಾರೆ ಮಾಡಿ ಪಚ್ಚ್... ಎಂದು ಗುಟಕಾರಸ ತುಪ್ಪಿ ಮತ್ತೆ ಗುಂಗಿನಲ್ಲೊಂದಾಗುತ್ತಿದ್ದರು.

ಪಚ್ಚುಗೆ, ಪಚ್ಚುವಿನ ಪಕ್ಕದಲ್ಲೇ ಕುಳಿತ ಮೆಸ್ತನಿಗೆ ಸಹ ಮಹೇಶನ ಮೇಲೆ ಸ್ನೇಹ ಪ್ರೀತಿಯಿಲ್ಲವೆಂದಲ್ಲ, ಆದರೆ ಇವೆಲ್ಲ ಬೇಕಿತ್ತಾ, ಆಯ್ತು ಹೋಯ್ತು ಅಂತ ಇರಬಾರದಾ ಎಂದು ತಮ್ಮ ಮನಸ್ಸೊಳಗಿದ್ದರೂ ಅತ್ತಲಾಗಿ ಹೇಳಲರಿಯ, ಇತ್ತಲಾಗಿ ಬಿಡಲರಿಯ ಎಂಬ ಸಂದಿಗ್ಧ ಪರಿಸ್ಥಿತಿ.